



ಅರುಣ ಪಿ. ಭಟ್ಟ

## ವಾರಭವಿಷ್ಯ: 2.9.2021ರಿಂದ 8.9.2021ರವರೆಗೆ




ಬಹುದಿನದಿಂದ ನಿರೀಕ್ಷಿಸಿದ ಮಕ್ಕಳ ಕೆಲಸದ ಸಮಸ್ಯೆ ಬಗೆಹರಿಯುವುದು. ಸರ್ಕಾರದಿಂದ ಬರುವ ಹಣ ಸಕಾಲಕ್ಕೆ ಬರುವುದು. ಸಂಘ ಸಂಸ್ಥೆಗಳಿಂದ ನಿರೀಕ್ಷಿತ ಲಾಭವಿದೆ. ವಾರಾಂತ್ಯದಲ್ಲಿ ಅನಿರೀಕ್ಷಿತ ಜನವಿರೋಧ ಎದುರಾಗಬಹುದು. ಭೂಮಿ ಖರೀದಿ ವ್ಯವಹಾರಗಳಿಗೆ ಉತ್ತಮ ಸಮಯ. ವಿದ್ಯಾರ್ಥಿಗಳಿಗೆ ಯಶಸ್ಸು ಸಿಗಲಿದೆ. ಶುಭದಿನ 5. ಆದಿತ್ಯ ಹೃದಯ ಪಠಿಸಿರಿ.




ವಾಹನ ಖರೀದಿಯಲ್ಲಿ ಜಾಗ್ರತೆ ವಹಿಸಿರಿ ಬಹುದಿನದ ಸಾಮಾಜಿಕ ಸ್ಥಾನಮಾನದಲ್ಲಿ ಪ್ರಗತಿ ಸಾಧಿಸುವಿರಿ. ಲೇಖಕರು ಮತ್ತು ಕಲಾವಿದರಿಗೆ ಶುಭವಾರ್ತೆ ಸಿಗಲಿದೆ. ಆರೋಗ್ಯದಲ್ಲಿ ಸುಧಾರಣೆ ಕಾಣಲಿದೆ. ವಿವಾಹ ಅಪೇಕ್ಷಿಗಳಿಗೆ ಉತ್ತಮ ಸಂಬಂಧಗಳು ಸಿಗುವ ಅವಕಾಶ. ಹೊಸಮನೆ ಕೆಲಸಗಳು ಅಭಾದಿತವಾಗಿ ನಡೆಯುತ್ತವೆ. ಹೊಸ ಕೆಲಸದ ಆಲೋಚನೆ ನಡೆಸಲಿದ್ದೀರಿ. ಶುಭದಿನ 4. ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.




ಪ್ರಾರಂಭದಲ್ಲಿ ಕಾಲುನೋವು ಉಲ್ಬಣಗೊಳ್ಳುವುದು. ನೆಂಟರ ಆಗಮನದಿಂದ ಮಹತ್ವದ ಚರ್ಚೆ ಫಲಪ್ರದವಾಗಲಿದೆ. ಸಹೋದರರ ನೈಜಮುಖದ ಪರಿಚಯವಾಗುವುದು. ಖರೀದಿ ವಿಕ್ರಿಯಲ್ಲಿ ಹೆಚ್ಚಿನ ಲಾಭ ಉಂಟಾಗಬಹುದು. ಅವಿವಾಹಿತ ವಧೂವರರಿಗೆ ನಿರೀಕ್ಷಿಸಿದಂತೆ ವಿವಾಹ ಯೋಗ. ನಿರುದ್ಯೋಗಿ ಪದವೀದರರಿಗೆ ಉದ್ಯೋಗ ಯೋಗವಿದೆ. ಶುಭದಿನ 5. ನಾಗ ಪ್ರತಿಮಾ ಪೂಜೆ ಮಾಡಿರಿ.




ಅಸಭ್ಯ ಜನರ ನಿಮ್ಮ ಕುಟುಂಬದಲ್ಲಿ ಪ್ರವೇಶ ಮಾಡುವುದರಿಂದ ಕಿರಿಕಿರಿ ಉಂಟಾಗುತ್ತದೆ. ತಂದೆಯೊಡನೆ ಮನಸ್ತಾಪ ಸಾಧ್ಯತೆ ಹೆಚ್ಚಿದೆ ಎಚ್ಚರದಿಂದ ಇರುವುದು ಕ್ಷೇಮ. ವಾಹನ ದುರಸ್ತಿ ಕಾರ್ಯ ಇಲ್ಲವೆ ವಾಹನ ಕಳ್ಳತನವಾಗುವ ಸಾಧ್ಯತೆ ಉಂಟು. ಕೃಷಿಮೂಲದಿಂದ ಧನಲಾಭ ಪ್ರಾಪ್ತಿ. ಸಾಮಾಜಿಕ ಯಶಸ್ಸು ನಿಮ್ಮ ಘನತೆಯನ್ನು ಹೆಚ್ಚಿಸಲಿದೆ. ಶುಭದಿನ 2. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಮಾನಸಿಕ ಸ್ವಾಸ್ಥ್ಯ ಕೆಡುವ ಘಟನೆ ಜರುಗುವುದು. ಹೊಟ್ಟೆ ನೋವಿನ ಉಪದ್ರವಗಳು ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಅವಮಾನಕರ ಪ್ರಸಂಗವನ್ನು ಎದುರಿಸುವ ಸಂದರ್ಭ ಬರಬಹುದು ಎಚ್ಚರಿಕೆ ಅಗತ್ಯ. ದೈಹಿಕ ಆರೋಗ್ಯ ಚೆನ್ನಾಗಿರುವುದು. ಕೆಲಸದವರಿಂದ ಸಹಾಯ. ನಿಮ್ಮ ಕೆಲಸ ಕಾರ್ಯಗಳಿಗೆ ಅಧಿಕಾರಿಗಳಿಂದ ಪ್ರಶಂಸೆ. ಶುಭದಿನ 4. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಹಲವು ಖರ್ಚುಗಳು ಮೇಳೈಸಿ ಬರಲಿವೆ. ಅದರಿಂದಾಗಿ ಅಧಿಕ ಹಣ ವ್ಯಯವಾಗಲಿದೆ. ಅನೀರಿಕ್ಷಿತ ಪ್ರವಾಸವನ್ನು ಕೈಗೊಳ್ಳುವ ಸಂಭವವೂ ಇದೆ. ಆಪ್ತರ ವಿವಾಹ ಕಾರ್ಯಕ್ಕೆ ನೆರವಾಗುವುದರಿಂದ ಆತ್ಮ ತೃಪ್ತಿ ಪ್ರಾಪ್ತಿ. ಆಳುಕಾಳುಗಳು ಕೈಕೊಡಬಹುದು ಅದನ್ನು ಎದುರಿಸಲು ಸಿದ್ಧರಿರಬೇಕು. ಕೌಟುಂಬಿಕ ಸುವಾರ್ತೆಯಿಂದ ಮನೆಯಲ್ಲಿ ಸಂತಸದ ವಾತಾವರಣ ನಿರ್ಮಾಣವಾಗಲಿದೆ. ಶುಭದಿನ 5. ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.




ಎಲ್ಲ ಮೂಲಗಳಿಂದ ಧನಲಾಭ ಪ್ರಾಪ್ತವಾಗಲಿದೆ. ಜೀವನದ ಮಹತ್ವಾಕಾಂಕ್ಷೆ ಪೂರ್ಣಗೊಳ್ಳುವ ಸಮಯ ಹತ್ತಿರವಾಗುತ್ತದೆ. ಹಳೆಯ ಮಿತ್ರರು ಒಳ್ಳೆಯ ಕೆಲಸಕ್ಕೆ ಜೊತೆಯಾಗುವರು. ಸಂತಸ ಸಮಾರಂಭಕ್ಕಾಗಿ ಅಧಿಕ ಖರ್ಚು ಮಾಡುತ್ತೀರಿ. ನವ ದಂಪತಿಗೆ ಸಂತಾನ ಪ್ರಾಪ್ತಿಯ ಯೋಗವಿದೆ. ಮಾನಸಿಕವಾಗಿ ಹೆಚ್ಚು ಸಂತೋಷದಿಂದ ಇರುತ್ತೀರಿ. ಶುಭದಿನ 3. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹಲವು ದಿನಗಳಿಂದ ಬಯಸಿದ ಅಧಿಕಾರ ಪ್ರಾಪ್ತಿಯಾಗುತ್ತದೆ. ನಿರೀಕ್ಷಿತರ ಆಸೆ ಫಲಿಸುವುದರಿಂದ ಸಂತಸ ಆಗುವುದರ ಜೊತೆ ನಿಮ್ಮ ಸ್ಥಾನಮಾನ ಉನ್ನತೀಕರಣ ಹೊಂದುವುದು. ವಿಶೇಷ ವಸ್ತ್ರ ಖರೀದಿ ಮಾಡುವ ಸಾಧ್ಯತೆ ಇದೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಕೌಟುಂಬಿಕ ಖರ್ಚು ಹಿಡಿತಕ್ಕೆ ಬರುವುದು. ಕೆಲಸದವರಿಂದ ಸಹಾಯ. ಶುಭದಿನ 2. ಶನಿಸ್ತೋತ್ರ ಪಠಿಸಿರಿ.




ಬಂಧುಗಳ ಸಹಕಾರದಿಂದ ಸಂಕಟ ಮುಕ್ತಿ ಆಗುತ್ತದೆ ಇದರಿಂದ ಮತ್ತಷ್ಟು ನಿರಾಳವಾಗುವಿರಿ. ಪತ್ನಿಯ ಮನೋಕಾಮನೆ ಪೂರ್ಣವಾಗುವುದು. ದೂರಪ್ರವಾಸಕ್ಕೆ ಸಿದ್ಧತೆ ಮಾಡಿಕೊಳ್ಳಲಿದ್ದೀರಿ. ನಿಮ್ಮ ಕೆಲಸ ಕಾರ್ಯಗಳಿಗೆ ಸಾಮಾಜಿಕ ಮನ್ನಣೆ ಸಿಗಲಿದೆ. ನಾಗರಿಕರಿಂದ ಪ್ರಶಂಸೆಯ ನುಡಿಗಳನ್ನು ಕೇಳಲಿದ್ದೀರಿ. ಉತ್ಸಾಹ ಇನ್ನೂ ಹೆಚ್ಚಿನ ಕೆಲಸಕ್ಕೆ ಪ್ರೇರೇಪಿಸುವುದು. ಶುಭದಿನ 4. ಕಾಲಭೈರವನ ಸೇವೆ ಮಾಡಿರಿ.




ಹಲವು ತಾಪತ್ರಯಗಳ ನಡುವೆ ಹಮ್ಮಿಕೊಂಡ ಕಾರ್ಯವನ್ನು ಸಕಾಲಕ್ಕೆ ಮಾಡಿ ಮುಗಿಸುವಿರಿ. ಆ ಮೂಲಕ ನಿಮ್ಮನ್ನು ವಿರೋಧಿಸುತ್ತಿದ್ದವರ ಮನದಲ್ಲೂ ಕೂಡಾ ಸಂತಸದ ಸಂಭ್ರಮವನ್ನುಂಟು ಮಾಡುವಿರಿ. ಸಹನೆಯಿಂದ ಕೆಲ ಸ್ಥಳಗಳಲ್ಲಿ ವಿಶೇಷ ಜನಪ್ರಿಯತೆಯನ್ನು ಗಳಿಸುವಿರಿ. ಹಾಗಾಗಿ ಬರಬೇಕಾಗಿದ್ದ ಹಣವು ಶೀಘ್ರದಲ್ಲಿ ದೊರೆಯುವುದು. ಶುಭದಿನ 2. ಆಂಜನೇಯ ಸ್ತೋತ್ರವನ್ನು ತಪ್ಪದೆ ಪಠಿಸಿ.




ಮಕ್ಕಳೊಂದಿಗೆ ಸಮಯ ಕಳೆಯುವುದು ಮುಖ್ಯ. ಕೇವಲ ಒಂದೇ ಒಂದು ಉತ್ತಮ ಕೆಲಸದಿಂದ ನಿಮ್ಮ ಶತ್ರುಗಳು ನಿಮ್ಮ ಸ್ನೇಹಿತರಾಗಬಹುದು. ನೀವು ಸಾಕಷ್ಟು ಆಸಕ್ತಿದಾಯಕ ಆಮಂತ್ರಣಗಳನ್ನು ಪಡೆಯುತ್ತೀರಿ. ಒಂದು ಅಚ್ಚರಿಯ ಕೊಡುಗೆಯೂ ನಿಮಗೆ ಸಿಗಬಹುದು. ನಿಮ್ಮ ಸಂಗಾತಿ ನಿಮ್ಮ ಒಂದು ಯೋಜನೆಯನ್ನು ಹಾಳುಮಾಡಬಹುದು; ತಾಳ್ಮೆ ಕಳೆದುಕೊಳ್ಳಬೇಡಿ. ಶುಭದಿನ 3. ಹನುಮಾನ್ ಚಾಲೀಸ್ ಓದಿರಿ.




ನಿಮ್ಮ ವೃತ್ತಿ ಜೀವನದ ಬಗ್ಗೆ ಸಾಕಷ್ಟು ಗಂಭೀರವಾಗಿ ಕೆಲಸವನ್ನು ಮಾಡುವಿರಿ. ಏನಾದರೂ ವಿಶೇಷವಾದುದನ್ನು ಸಾಧಿಸುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ನಿಮ್ಮ ಖರ್ಚುಗಳು ಜಾಸ್ತಿಯಾಗುವ ಸಾಧ್ಯತೆಯಿರುತ್ತದೆ. ಸ್ನೇಹಿತರು ನಿಜವಾಗಿಯೂ ಈ ಸಂದರ್ಭದಲ್ಲಿ ಸಹಾಯ ಮಾಡುವರು. ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ ಹೆಚ್ಚಾಗುವುದು. ಶುಭದಿನ 4. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.